**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿಸಿ ನಂ 43/2022**

**ಸಿ.ಡಬ್ಲೂಃ 08 ಪಿಡಬ್ಲೂಃ 09**

| | |
|---|---|
| ಸಾಕ್ಷಿದಾರರ ಹೆಸರು | ಕೆ.ಎಲ್. ಮೂರ್ತಿ |
| ತಂದೆಯ ಹೆಸರು | ಲಕ್ಷ್ಮಯ್ಯ |
| ವಯಸ್ಸು | 45 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕಲ್ಲುಕೋಟೆ |

**ದಿನಾಂಕಃ 23.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರಿಂದ**

ಆರೋಪಿತರು ಗೊತ್ತು. ಚಾಸಾ-1 ರಿಂದ 3, 7 ಮತ್ತು 9 ರವರು ಗೊತ್ತು. ದಿಃ 26.11.2016 ರಲ್ಲಿ ಚಾಸಾ-1 ರವರ ಮನೆಯಲ್ಲಿ ಮದುವೆ ಮಾತುಕತೆ ಮಾಡಿದ್ದು, ಹುಡುಗಿಗೆ ಮದುವೆಯ ಸಮಯದಲ್ಲಿ ಒಂದು ನೆಕ್ಲೆಸ್, ಮಾಂಗಲ್ಯ ಸರ, 2 ಜೊತೆ ಓಲೆ ಜುಮುಕಿ, ನಾಲ್ಕು ಜೊತೆ ಉಂಗುರ, ಆರೋಪಿ-1 ರವರಿಗೆ ಒಂದು ಕತ್ತಿನ ಸರ ಮತ್ತು ಒಂದು ಉಂಗುರ ಕೊಟ್ಟಿರುತ್ತಾರೆ. ದಿಃ 30.04.2017 ರಲ್ಲಿ ಘಾಟಿ ಸುಬ್ರಮಣ್ಯ ಸಮ್ಮುಖ ಭವನದಲ್ಲಿ ಮದುವೆಯಾಗಿರುತ್ತದೆ. ಮದುವೆಯಾಗಿ ಸ್ವಲ್ಪ ದಿನ ಆರೋಪಿ-1 ರವರ ಮನೆಯಲ್ಲಿದ್ದು, ವರದಕ್ಷಿಣೆ ವಿಚಾರವಾಗಿ ಗಲಾಟೆ ಮಾಡಿಕೊಂಡು, ಚಾಸಾ-1 ರವರ ತಂದೆ ತಾಯಿ ಹೋಗಿ ಕೇಳಿರುತ್ತಾರೆ. 2018 ರಲ್ಲಿ ಚಾಸಾ-1 ರವರನ್ನು ಆರೋಪಿ-1 ರವರ ಮನೆಯಿಂದ ಕರೆದುಕೊಂಡು ಬಂದಿರುತ್ತಾರೆ. ನಂತರ ಆರೋಪಿ ಊರಿಗೆ ಬಂದು ಗಲಾಟೆ ಮಾಡಿರುತ್ತಾರೆ. ಚಾಸಾ-1 ರವರಿಗೆ ಸಂಬಂಧಿಸಿದ ದಾಖಲೆಗಳು ಆರೋಪಿಯ ಮನೆಯಲ್ಲಿದ್ದು, ಕೇಳಿದ್ದಕ್ಕೆ ಗಲಾಟೆ ಮಾಡಿರುತ್ತಾರೆ. ಹಾಗಾಗಿ ಚಾಸಾ-1 ರವರು ಮಹಿಳಾ ಪೋಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ದಿಃ 27.01.2021 ರಲ್ಲಿ ಮಹಜರ್ ಗೆ ಎಂದು ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನ ಸಮಕ್ಷಮ ಮದುವೆಯ ಲಗ್ನ ಪತ್ರಿಕೆ ಮತ್ತು ನಾಲ್ಕು ಛಾಯಾಚಿತ್ರಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

ಅದು ಈಗಾಗಲೇ ನಿಪಿ-4 ರಿಂದ 8 ಎಂದು ಗುರುತಿಸಲಾಗಿದೆ. ನಿಪಿ-3 ನ್ನು ಜರುಗಿಸುವ ಸಮಯದಲ್ಲಿ ನಾನು ಚಾಸಾ-1 ಮತ್ತು 9 ರವರು ಹಾಜರಿದ್ದರು. ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ 8 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ.

**(ಸಾಕ್ಷಿಯನ್ನು ಭಾಗಶಃ ಪ್ರತೀಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಅಭಿಯೋಜನೆಯು ಪಾಟೀ ಸವಾಲಿಗೆ ಅವಕಾಶ ಕೋರಿದ್ದು, ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರಿಂದ**

ಮದುವೆ ಮಾತುಕತೆಗೆ ನನ್ನನ್ನು ಕರೆದಿದ್ದು ಆರೋಪಿ-1 ರವರ ತಂದೆ ಆರೋಪಿಗೆ ಕತ್ತಿನ ಚೈನು, ಉಂಗುರ ಕೊಡುವಂತೆ ಕೇಳಿದ್ದಕ್ಕೆ ಚಾಸಾ-1 ರವರ ತಂದೆ ಕೊಟ್ಟಿರುತ್ತಾರೆ ಎಂದರೆ ಸರಿ. ಮದುವೆಯ ನಂತರ ಆರೋಪಿ ಮತ್ತು ಚಾಸಾ-1 ರವರು ಬೆಂಗಳೂರಿನಲ್ಲಿ ವಾಸವಿದ್ದು, ಆರೋಪಿ-1 ರವರು ಮನೆ ಕಟ್ಟಬೇಕೆಂದು ರೂ. 5,00,000/- ಹಣವನ್ನು ತರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಚಾಸಾ-2 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ರೂ. 1 ½ ಲಕ್ಷ ಹಣವನ್ನು ಹೊಂದಿಸಿಕೊಟ್ಟಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಆರೋಪಿ ಮನೆಯಲ್ಲಿದ್ದಾಗ ಅವರ ಆಧಾರ್ ಕಾರ್ಡ್ ಅನ್ನು ನೋಡಲಾಗಿ ಅವರ ಹೆಸರು ಕೃಷ್ಣ ಬಿನ್ ಆಂಜನಪ್ಪ ಎಂದು ಇದ್ದು, ಚಾಸಾ-1 ರವರಿಗೆ ಅನುಮಾನ ಬಂದು ವಿಚಾರಿಸಲಾಗಿ ಆರೋಪಿ-1 ರವರು ಕೃಷ್ಣ ಎಂಬ ಹೆಸರಿನಲ್ಲಿ ಯಶಸ್ವಿನಿ ಅಲಿಯಾಸ್ ಅನುಪಮಾ ಎಂಬುವವರಿಗೆ ಈ ಹಿಂದೆ ವಿವಾಹವಾಗಿ ವಿಚ್ಛೇದನ ಪಡೆದುದ್ದು, ಅದನ್ನು ಮರೆಮಾಚಿ ವೆಂಕಟೇಶ್ ಎಂಬ ಹೆಸರಿನಲ್ಲಿ ಚಾಸಾ-1 ರವರನ್ನು ಮದುವೆ ಮಾಡಿಕೊಂಡು ಅವರು ಕೇಳಿದ್ದಕ್ಕೆ ಅವಾಚ್ಯಶಬ್ಧಗಳಿಂದ ಬೈದು ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿ ಪ್ರಾಣಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ದಿಃ 28.04.2018 ರಂದು ಚಾಸಾ-3 ರವರು ಚಾಸಾ-1 ರವರನ್ನು ಮನೆಗೆ ಕರೆದುಕೊಂಡು ಬರಲು ಹೋದಾಗ ಅವರ ಮಗಳು ಒಬ್ಬಳೇ ಇದ್ದು, ನಂತರ ಆರೋಪಿ-2 ರವರ ಒಪ್ಪಿ ಗೆ ಪಡೆದು

ಮನೆಗೆ ಕರೆದುಕೊಂಡು ಬಂದಿರುತ್ತಾರೆಂದು ನನಗೆ ವಿಚಾರ ತಿಳಿಸಿರುತ್ತಾರೆಂದರೆ ಸರಿ. ದಿಃ 22.01.2020 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಚಾಸಾ-1 ರವರು ಒಬ್ಬರೇ ಮನೆಯಲ್ಲಿದ್ದಾಗ ಆರೋಪಿತರು ಮನೆಯ ಹತ್ತಿರ ಹೋಗಿ ವಿಚ್ಛೇದನ ಕೊಡಬೇಕು ಇಲ್ಲದಿದ್ದರೆ ತವರು ಮನೆಯಿಂದ ಹಣ ತೆಗೆದುಕೊಂಡು ಬರಬೇಕೆಂದು ಕೈಗಳಿಂದ ಹೊಡೆದಿರುತ್ತಾರೆ ಎಂಬ ವಿಚಾರವನ್ನು ಚಾಸಾ-2 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. 2020 ರಲ್ಲಿ ದೂರು ಕೊಟ್ಟಿದ್ದು ಚಾಸಾ-1 ರವರು ಆರೋಪಿ ಮನೆಯಿಂದ ಬರುವಾಗ ಅವರ ಅಂಕಪಟ್ಟಿಗಳನ್ನು ಮತ್ತು ದಾಖಲೆಗಳನ್ನು ಅವರ ಮನೆಯಿಲ್ಲಿಯೇ ಇರಿಸಿದ್ದು ಕೊಡಿಸಿ ಕೊಡಿ ಎಂದು ದಿಃ 04.04.2021 ರಂದು ದೂರು ಕೊಟ್ಟಿರುತ್ತಾರೆ ಎಂಬ ವಿಚಾರವನ್ನು ನನಗೆ ಹೇಳಿರುತ್ತಾರೆ ಎಂದರೆ ಸರಿ. ಆರೋಪಿ ಮದುವೆಯಾಗಿರುವ ವಿಚಾರವನ್ನು ಮರೆಮಾಚಿ ಚಾಸಾ-1 ರವರನ್ನು ವಿವಾಹವಾಗಿರುವ ವಿಚಾರವನ್ನು ಚಾಸಾ-2 ರವರು ತಿಳಿಸಿರುತ್ತಾರೆ ಎಂದರೆ ಸರಿ. ಚಾಸಾ-2 ರವರು ತಮ್ಮ ಜಮೀನಿನಲ್ಲಿ ಭಾಗ ಮಾಡಿಕೊಂಡು ಅದನ್ನು ಮಾರಾಟ ಮಾಡಿ ಬಂದ ಹಣದಿಂದ ಚಾಸಾ-1 ರವರ ಮದುವೆ ಮಾಡಿರುವ ವಿಚಾರವನ್ನು ನನಗೆ ತಿಳಿಸಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಿಂದ**

ದಿಃ 27.01.2021 ರಂದು ಠಾಣೆಗೆ ಹೋಗಿರುತ್ತೇನೆ. ನಿಪಿ-4 ನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆಂದು ಹೇಳಿರುತ್ತೇನೆ. ಅದರ ಬಲ ಮತ್ತು ಎಡಬದಿಯಲ್ಲಿ ಯಾವ ಯಾವ ದೇವರುಗಳ ಹೆಸರುಗಳನ್ನು ನಮೂದಿಸಲಾಗಿದೆ ಎಂದು ಪ್ರಶ್ನಿಸಿರುತ್ತಾರೆ. ಸದರಿ ಪ್ರಶ್ನೆ ಸಮಂಜಸವಲ್ಲ ಎಂದು ಅವರ ಪ್ರಶ್ನೆಯನ್ನು ನ್ಯಾಯಾಲಯ ತಿರಸ್ಕರಿಸಿರುತ್ತದೆ. ಮಾಲು ಅಮಾನತ್ತು ಪಂಚನಾಮೆಯ ಚೆಕ್ಕುಬಂಧಿ ಗೊತ್ತಿಲ್ಲ. ಆ ದಿನ ನಾನು ಠಾಣೆಗೆ ಹೋಗಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 21.01.2021 ರಂದು ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿಗೆ ಮತ್ತು ಚಾಸಾ-1 ರವರಿಗೆ ಒಡವೆ ಕೊಟ್ಟಿರುವ ಬಗ್ಗೆ ದಾಖಲೆ ಇರುತ್ತದೆ. ಆ ದಾಖಲೆಯನ್ನು ನನಗೆ ತೋರಿಸಿರುವುದಿಲ್ಲ. ಸರ್ವೇ ನಂ. 35/4 ರ ಜಮೀನಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ಈ ವಿಚಾರವಾಗಿ ಯಾವುದೇ ಹೇಳಿಕೆ ಕೊಡದ್ದಿರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**CC No.43/2022**
**PW.9**

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ ಮೇರೆಗೆ ರೂ. 200/- ವೆಚ್ಚಗಳೊಂದಿಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**